# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5)/ಪಿಆರ್/62/2019–10

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 24/01/2020

## ಸುತ್ತೋಲೆ

ವಿಷಯ: ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ನೌಕರರ ದುರ್ನಡತೆ / ಕರ್ತವ್ಯಲೋಪ ಎಸಗಿದಾಗ ಪ್ರಾಥಮಿಕ ತನಿಖೆ ಅಪೇಕ್ಷಣೀಯವಾಗಿದ್ದು, ಸರ್ಕಾರಿ ನೌಕರನು ಎಸಗಿರಬಹುದಾದಂತಹ ದುರ್ನಡತೆಯ ಬಗ್ಗೆ ಶಿಸ್ತು ಪ್ರಾಧಿಕಾರಕ್ಕೆ ಮೇಲ್ನೋಟಕ್ಕೆ ಮನದಟ್ಟಾದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು–1958, ಕರ್ನಾಟಕ ಸರ್ಕಾರಿ ನೌಕರರ (ವರ್ತನೆ) ನಿಯಮಗಳು–1966 ಮತ್ತು ಕರ್ನಾಟಕ ಸರ್ಕಾರಿ ಸೇವಾ (ಸಿ.ಸಿ & ಎ) ನಿಯಮಗಳು–1957 ರನ್ವಯ ಕ್ರಮವಹಿಸಬೇಕಾಗಿರುತ್ತದೆ.

ಅಧಿಕಾರಿ / ನೌಕರರು ಎಸಗಿರುವ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ, ಪ್ರಥಮ ಹಂತವಾಗಿ ಕಾರಣ ಕೇಳಿ ಪತ್ರವನ್ನು ಹೊರಡಿಸಿ, ಸದರಿ ಕಾರಣ ಕೇಳಿ ಪತ್ರಕ್ಕೆ ಸಂಬಂಧಿಸಿದ ಅಧಿಕಾರಿ / ನೌಕರರು ಸಲ್ಲಿಸುವಂತಹ ಸಮಜಾಯಿಷಿಯನ್ನು ನಿಯಮಾನುಸಾರ ಪರಿಶೀಲಿಸಿ, ಸಮಜಾಯಿಷಿಯು ಸಮರ್ಪಕವಾಗಿಲ್ಲದ ಸಂದರ್ಭದಲ್ಲಿ ಅಧಿಕಾರಿ / ನೌಕರರ ವಿರುದ್ದ ನಿಯಮಾವಳಿಗಳನ್ವಯ ಇಲಾಖಾ ವಿಚಾರಣೆ / ಶಿಸ್ತುಕ್ರಮ ಜರುಗಿಸುವ ಭಾಗವಾಗಿ ಆರೋಪಣಾ ಪಟ್ಟಿಯನ್ನು {ಅನುಬಂಧ–I ರಿಂದ IV} 90 ದಿವಸಗಳೊಳಗಾಗಿ ಹೊರಡಿಸಬೇಕಾಗಿರುತ್ತದೆ. {ಸದರಿ ಆರೋಪಣಾ ಪಟ್ಟಿಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 01 ಸೇಇವಿ 2005, ದಿನಾಂಕ: 09–02–2005 ಹಾಗೂ ಸಿಆಸುಇ 55 ಕೆಇವಿ 2010, ದಿನಾಂಕ: 20–11–2010ರಲ್ಲಿನ ಮಾರ್ಗಸೂಚಿಗಳಲ್ಲಿ ನೀಡಿರುವ ಅಂಶಗಳನ್ನು ಒಳಗೊಂಡಿರಬೇಕು} ಆರೋಪಣಾ ಪಟ್ಟಿಯನ್ನು ಅಧಿಕಾರಿ / ನೌಕರರಿಗೆ ಜಾರಿ ಮಾಡಿ, ಅವರಿಂದ ಲಿಖಿತ ವಿವರಣೆ ಪಡೆಯುವುದು ಶಿಸ್ತುಕ್ರಮದ ಪ್ರಥಮ ಹಂತವಾಗಿದ್ದು, ಈ ಹಿನ್ನೆಲೆಯಲ್ಲಿ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ಹೊರಡಿಸುವ ಆರೋಪಣಾ ಪಟ್ಟಿಯಲ್ಲಿ ಆರೋಪವು ಸ್ಪಷ್ಟವಾಗಿದ್ದು, ಮಾಡಿರುವ ದುರ್ನಡತೆಯನ್ನು ಬಿಂಬಿಸುವಂತೆ ಇರಬೇಕು. ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ದುರ್ನಡತೆ ಕುರಿತಾದ ಆರೋಪ ಸಾರಾಂಶ, ಆರೋಪದ ವಿವರಗಳು, ಆರೋಪಕ್ಕೆ ಸಂಬಂಧಿಸಿದ ದಾಖಲಾತಿ ಪಟ್ಟಿಗಳು, ಆರೋಪಕ್ಕೆ ಸಂಬಂಧಿಸಿದ ಸಾಕ್ಷಿಗಳ ವಿವರಗಳನ್ನು ನಿಗಧಿತ ಸಮಯದಲ್ಲಿ ಆಡಳಿತ ಶಾಖೆಗೆ ಒದಗಿಸಿ ಇಲಾಖಾ ವಿಚಾರಣೆಗೆ ಜರೂರಾಗಿ ನಡೆಸುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಎಲ್ಲಾ ವಲಯ ಜಂಟಿ ಆಯುಕ್ತರುಗಳು ಹಾಗೂ ಕೇಂದ್ರ ಕಛೇರಿಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳ ಕರ್ತವ್ಯಲೋಪವನ್ನು ಎಸಗಿದ್ದ ಸಂದರ್ಭದಲ್ಲಿ ಅಂತಹ ಅಧಿಕಾರಿ / ನೌಕರರು ಎಸಗಿರುವ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ, ಪ್ರಥಮ ಹಂತವಾಗಿ ಕಾರಣ ಕೇಳಿ ಪತ್ರವನ್ನು ಹೊರಡಿಸಿ, ಸದರಿ ಕಾರಣ ಕೇಳಿ ಪತ್ರಕ್ಕೆ ಸಂಬಂಧಿಸಿದ ಅಧಿಕಾರಿ / ನೌಕರರು ಸಲ್ಲಿಸುವಂತಹ ಸಮಜಾಯಿಷಿಯನ್ನು ನಿಯಮಾನುಸಾರ ಪರಿಶೀಲಿಸಿ, ಸಮಜಾಯಿಷಿಯು ಸಮರ್ಪಕವಾಗಿಲ್ಲದ ಸಂದರ್ಭದಲ್ಲಿ ಅಧಿಕಾರಿ / ನೌಕರರ ವಿರುದ್ದ ನಿಯಮಾವಳಿಗಳನ್ವಯ ಇಲಾಖಾ ವಿಚಾರಣೆ / ಶಿಸ್ತುಕ್ರಮ ಜರುಗಿಸುವ ಭಾಗವಾಗಿ ಅಧಿಕಾರಿ / ನೌಕರರುಗಳ ವಿರುದ್ಧ ಆಗಿರುವ ದುರ್ನಡತೆ / ಕರ್ತವ್ಯಲೋಪದ ಸ್ವರೂಪ, ಪ್ರಮಾಣ, ಸಾಕ್ಷಿಗಳ ವಿವರ ಹಾಗೂ ದಸ್ತಾವೇಜುಗಳ ವಿವರಗಳನ್ನೊಳಗೊಂಡಂತೆ ಅನುಬಂಧ–I ರಿಂದ IVರಲ್ಲಿನ ಕರಡು ಆರೋಪಣಾ ಪಟ್ಟಿಯನ್ನು ತಯಾರಿಸಿ ಪೂರಕ ದಾಖಲೆಗಳೊಂದಿಗೆ 15 ದಿನಗಳೊಳಗಾಗಿ ಆಡಳಿತ ಶಾಖೆಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

Office of IT Adviser
No. 670
01-02-2020

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

01/02/2020

ಮ.ತಿ.ನೋ..

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ವಿಶೇಷ ಆಯುಕ್ತರು (ಯೋಜನೆ/ಆಡಳಿತ/ಹಣಕಾಸು/ಆಸ್ತಿಗಳು/ಘನತ್ಯಾಜ್ಯ ನಿರ್ವಹಣೆ/ಕಲ್ಯಾಣ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡಲು ಕೋರಿದೆ.

: ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರವರುಗಳಿಗೆ ಕಳುಹಿಸಿದೆ.

: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.

: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.

: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

: ಕಛೇರಿ ಪ್ರತಿ